**ಚನೆಗಳೈ, ದೇವ, ನಿ-**
**ನ್ನನು ಮರೆಯೆ, ಹಸುಳೆ ತಾ-**
**ಯನು ತೊರೆದು ಸುಖಿಸುವುದೆ?**

**18-1-42 ರಾತ್ರಿ 9.35**

ಶ್ರೀ ಗೋಠೆಯವರು ಬಂದಿದ್ದರು. ನಾಳೆ ತೊಲೆಗಳನ್ನು ಕೂಡಿಸುವ ಕೆಲಸವು ಪ್ರಾರಂಭವಾಗುವುದೆಂದು ಹೇಳಿದರು.

ಸಂಜೆಯಾದ ಬಳಿಕ ಹರಪನಹಳ್ಳಿ ವೆಂಕಣ್ಣನೂ ಬಂದಿದ್ದನು. ಸಾಧು ಜೀವನದ ಮಹಿಮೆಯನ್ನು ಕುರಿತು ಮಾತು ನಡೆಯಿತು. ಸುಖದ ಉಗಮಸ್ಥಾನವು ಧನವಲ್ಲ, ಆದರೆ ಸಾಧುಜೀವನವು ಎಂಬ ಮಾತನ್ನು ಉದಾಹರಣೆಗಳಿಂದ ಸ್ಪಷ್ಟಗೊಳಿಸಲು ಯತ್ನಿಸಿದೆನು. ಈ ಬಗೆಯ ಚರ್ಚೆಯಿಂದ ಅಂತಃಕರಣವು ಎಷ್ಟು ಉದಾತ್ತವಾಗುತ್ತದೆ! ಪ್ರೇಮಮಯವಾದ ವಾತಾವರಣದಲ್ಲಿ ಈ ಚರ್ಚೆಗಳು ಸಾಗುತ್ತಿರಬೇಕು. ಶ್ರೀಹರಿ, ಇಂತಹ ಚರ್ಚೆಗಳಿಗೆ ನನ್ನ ಮನೆ ನೆಲೆಯಾಗಲಿ.

**ದೇವಾ, ನನ್ನ ಮನಸ್ಸು ನನ್ನ ವಶವರ್ತಿಯಾಗಿರಲಿ.**
**ಅವಿಧೇಯ ಮನವೆನ್ನ-**
**ದವಿವೇಕಕೆಡೆಯಾಗಿ**
**ಹವಣಿಸುತ್ತದಕಿದಕೆ**
**ಬವಣೆಗೊಳುತಿದೆ, ತಂದೆ!**

* * *

**ತಾರೆ ಹೊಳೆಯುತಲಿಹುದು ದೂರದೂರದಲದೊ!**
**ಕೋರುತಿಹುದೆನ್ನ ಬಗೆ ಸಾರಿ ನಿಲಲದರ ಬಳಿ!**

**19-1-42 ರಾತ್ರಿ 9.25**

ಸಂಜೆಯ ಮುಂದೆ ಮನೆಯ ಕಟ್ಟಡದ ಕಡೆಗೆ ಹೋಗಿದ್ದೆನು. ಹರಪನಹಳ್ಳಿ ವೆಂಕಣ್ಣನು ಬಂದಿದ್ದನು. ಮನೆಯ ಯೋಜನೆ ಅವನ ಮನಸ್ಸಿಗೆ ಬಂದಿತು.

'ಹರಿಜನ ಬಂಧು' ಪತ್ರಿಕೆ ಬಂದಿದೆ. ಮನಸ್ಸು ವಶದಲ್ಲಿ ಇದ್ದ ಹೊರ್ತು ಮನುಷ್ಯನಿಗೆ ನಿಜವಾದ ಸುಖವಿಲ್ಲ.

**20-1-42 ರಾತ್ರಿ 9.3**

ಗೋಠೆ ಕೇಶವರಾಯರು ಮತ್ತೆ ನನ್ನಿಂದ 180 ರೂ.ಗಳನ್ನು ಒಯ್ದರು. ಮನೆಗೆ ತೊಲೆಗಳನ್ನು ಕೂಡಿಸಲು ಆರಂಭಿಸಿರುವರು. ಇನ್ನಾದರೂ ಗೋಠೆಯವರು ಬೇಗನೆ ಕೆಲಸವನ್ನು ಮುಗಿಸಿ ಕೊಡುವರೊ?

ರುಕ್ಮಾಂಗದರಾಯರಿಗೆ ಇಂದು ಪತ್ರ ಬರೆವುದಾಗಲಿಲ್ಲ.

**ಮನದ ನೂರೆಂಟು ಯೋ- | ಚನೆಗೆ ಬೇಸತ್ತೆನೈ!**
**ಮನವು ನಿನ್ನಡಿಯನೇ | ನೆನೆಯುತೆಂದಿಹುದಯ್ಯ? |**

**21-1-42 ರಾತ್ರಿ 9.10**

ಇಂದು ಮತ್ತೆ ಮನೆಯ ಕೆಲಸವು ನಡೆಯಲಿಲ್ಲ. ಗೋಠೆಯವರು ಕೆಲಸವನ್ನು ಬಹಳವಾಗಿ ದುರ್ಲಕ್ಷಿಸುತ್ತಿರುವರು. ಇನ್ನು ಸತ್ಯಾಗ್ರಹವನ್ನೆ ಮಾಡ ಬೇಕಾಗಬಹುದೊ? ಶ್ರೀಹರಿ, ಈ ಬಗೆಯ ಪ್ರಸಂಗವನ್ನು ತಪ್ಪಿಸು, ತಂದೆ!

ಪ್ರಿಲಿಮಿನರಿ ಪರೀಕ್ಷೆಯ ಕಾಗದಗಳು ಬಂದಿವೆ. ಕೆಲವನ್ನು ಪರೀಕ್ಷಿಸಿದೆನು. ಇನ್ನೂ ಉಳಿದಿವೆ. ನಾಳೆ ಮುಗಿಸಲಿಕ್ಕೆ ಬೇಕು.

ಸತ್ಯಾಗ್ರಹದ ಶಾಸ್ತ್ರವನ್ನು ತಿಳಿಯಬೇಕಾದರೆ ಅದನ್ನು ತಿಳಿದ ಮಟ್ಟಿಗೆ ಮನಃಪೂರ್ವಕವಾಗಿ ಆಚರಿಸುತ್ತ ಸಾಗ ಬೇಕು. ಸತ್ಯಾಗ್ರಹದ ರಹಸ್ಯವು - ಯಾರ ವಿಷಯದಲ್ಲಿ ಸತ್ಯಾಗ್ರಹವನ್ನು ಕೈಕೊಳ್ಳಬೇಕಾಗಿರುವುದು ಅವರ ವಿಷಯದಲ್ಲಿ ಪ್ರೇಮವಿರಲುಬೇಕು. ಸಿಟ್ಟು ಇರಕೂಡದು.

**ಹಿಂದಂತು ಮುಂದೆಂತೊ | ಎಂದು ಚಿಂತಿಸಲೊಲ್ಲೆ |**
**ಇಂದು ಶುಚಿಯಾಗಿರಿಸು. | ತಂದೆ, ತೃಪ್ತನು ನಾನು! ||**
**ಬರುವುದೆಂಬುದು ಬಾರ- | ದಿರದು; ನಿನ್ನಡಿಯೆನಗೆ**
**|ಶರಣೆಂದು ತಲೆವಾಗು- | ತಿರುವೆ, ಪುರುಷೋತ್ತಮಾ! ||**
**ನರನೆ ನಿರ್ಘೃಣನಾಗಿ | ನರವಸತಿಯೊಳೆ ಇಂತು |**
**ನರರ ನೆತ್ತರ ಹೊನಲ | ಹರಿಯಿಸುವೆಯಲ್ಲವೋ! ||**
**ಏತಕೀ ನರಹತ್ಯೆ? | ಪಾತಕೀ! ಬಾಂಧವರ |**
**ಘಾತವನು ಗೈದಾತ್ಮ- | ಘಾತಕೆಡೆ ಮಾಡುತಿಹೆ! ||**
**ನರನನೊಬ್ಬರು ದಾಸ್ಯ- | ನರಕದಗ್ನಿಯಲಿ ಹುರಿ- |**
**ವರು! ಹರಿಯಿಸುವರು ನೆ- | ತ್ತರ ಹೊನಲನೊಬ್ಬರಲೆ! ||**